**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ129/2011</u>** **ಡಿ.ಡಬ್ಲೂಃ 02**

ಸಾಕ್ಷಿಯನ್ನು ಇಂದು ದಿನಾಂಕಃ **14.10.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟಿ ಸವಾಲುಃ** ವಾದಿ ಪರ ಶ್ರೀ ಎಸ್.ಜೆ ವಕೀಲರಿಂದಃ</u>

ನಮ್ಮ ಗ್ರಾಮದಲ್ಲಿ ಮುಸ್ಲಿಂ ಸಮುದಾಯ 1 ಸಾವಿರ ಮನೆ ಇರುತ್ತದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಮನೆ ಹಾಗೂ ನನ್ನ ಮನೆ ಬೇರೆ ಬೇರೆ ಕಡೆ ಇರುತ್ತವೆ ಎಂದರೆ ಸರಿ.

ಹಕ್ಕು ನಿವೃತ್ತಿ ಪತ್ರದ ಮಾತುಕತೆಗೆ ನಾನು ಹೋಗಿರಲಿಲ್ಲ ಎಂದರೆ ಸರಿ. ಚಾಪಕಾಗದವನ್ನು 1 ನೇ ಪ್ರತಿವಾದಿ ಖರೀದಿ ಮಾಡಿಕೊಂಡು ಬಂದಿದ್ದರು. ಹಕ್ಕು ನಿವೃತ್ತಿ ಪತ್ರವನ್ನು ನಮ್ಮ ಊರಿನ ವೆಂಕಟೇಶರವರ ಮನೆಯಲ್ಲಿ ಬರೆದರು. ಸದರಿಯವರ ಮನೆ ನಮ್ಮ ಮನೆಯ ಹತ್ತಿರ ಇರುವುದಿಲ್ಲ ಎಂದರೆ ಸರಿ. ಎಷ್ಟು ಮೊತ್ತದ ಚಾಪಕಾಗದ ಹಾಗೂ ಎಷ್ಟು ಚಾಪಕಾಗದಗಳನ್ನು ತಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವರು ತಂದು ಎಲ್ಲಾ ಚಾಪಕಾಗದಗಳ ಮೇಲೆ ಬರವಣಿಗೆ ಆಗಿರುತ್ತದೆ, ಯಾವುದೇ ಖಾಲಿ ಚಾಪಕಾಗದ ಉಳಿದಿರಲಿಲ್ಲ. 1 ನೇ ಪ್ರತಿವಾದಿಯ ಹೇಳಿಕೆಯ ಮೇರಗೆ ಹಕ್ಕು ನಿವೃತ್ತಿ ಪತ್ರವನ್ನು ತಯಾರಿಸಲಾಯಿತು. ಹಕ್ಕು ನಿವೃತ್ತಿ ಪತ್ರ ತಯಾರಿಸುವ ಸಮಯದಲ್ಲಿ ವಾದಿ, ನೂರಲ್ ಹುಸೇನ, ಜಿ.ನಜೀರ ಅಹ್ಮದ, ನಾನು ಮತ್ತು ಮಹಮ್ಮದ ಕಲೀಲ್ ಉರ ರೆಹಮಾನ್‌ರವರು ಹಾಜರಿದ್ದರು. ಮಹಮ್ಮದ ಕಲೀಲ್ ಉರ ರೆಹಮಾನ್‌ರವರ ತಂದೆಯ ಹೆಸರು ಅಬ್ದುಲ್ ಗಫರ, ಜಿ.ನಜೀರ ಅಹ್ಮದರವರ ತಂದೆಯ ಹೆಸರು ಸಹ ಅಬ್ದುಲ್ ಗಫರ ಎಂದು ಇರುತ್ತದೆ. ವಾದಿಯ ತಂದೆಯ ಹೆಸರು ಅಬ್ದುಲ್ ಗಫರ ಎಂದು ಇರುತ್ತದೆ. ಹಕ್ಕು ನಿವೃತ್ತಿ ಪತ್ರದಲ್ಲಿ ಬರೆದಿರುವ ಸಂಗತಿಗಳು ಪ್ರಸ್ತುತ ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

ನಿಡಿ-3 ನ್ನು ಪಕ್ಷಗಾರರು ಇಂಗ್ಲೀಷ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ನಿಡಿ-3 ಪತ್ರ ಬರೆಯುತ್ತಿರುವ ಸಮಯದಲ್ಲಿ ನಾನು ಹೋಗಿರುತ್ತೇನೆ. ಇಕ್ಬಾಲ್ ಹುಸೇನ ಮತ್ತು ನೂರುರ ಹುಸೇನರವರಿಗೆ ರೂ.77,600/- ಹಣವನ್ನು ಸಮಾನ್ನಾಗಿ ಹಂಚಿರುತ್ತಾರೆ. ನನ್ನ

ಸಮಕ್ಷಮ ಸದರಿ ಹಣವನ್ನು ಹಂಚಿರುತ್ತಾರೆ ಹಾಗೂ ಬರವಣಿಗೆ ಮಾಡಿರುತ್ತಾರೆ. ನಿಡಿ-3 ದಾಖಲೆಯನ್ನು ನನ್ನ ಸಮಕ್ಷಮ ಬರೆದಿರುವುದಿಲ್ಲ ಹಾಗೂ 1 ನೇ ಪ್ರತಿವಾದಿಯು ಸದರಿ ದಾಖಲೆಯನ್ನು ನನ್ನ ಮನೆಗೆ ತಂದು ನನ್ನ ಸಹಿ ಪಡೆದು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ವಾದಿಗೆ ಅರ್ಧ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**